# ನಿನ್ನ ಮಗನೇನೇ ಗೋಪಿ ಗೋಪಮ್ಮ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 07
2. **Note:** Singer has followed these wordings.

ರಾಗ: ರೇಗುಪ್ತಿ ತಾಳ: ಅಟ

ನಿನ್ನ ಮಗನೇನೇ ಗೋಪಿ ಗೋಪಮ್ಮ
ನಿನ್ನ ಮಗನೇನೆ ಗೋಪಿ? ॥ ಪ ॥

ಚೆನ್ನಾರ ಚೆಲುವ ಉಡುಪಿಯ ಕೃಷ್ಣ ಬಾಲ
ನಿನ್ನ ಮಗನೇನೆ ಗೋಪಿ? ॥ ಅಪ ॥

ಕಟವಾಯ ಬೆಣ್ಣೆ ಕಾಡಿಗೆಗಣ್ಣುಕಟಿಸೂತ್ರ
ಪಟವಾಳಿ ಕೈಪ ಕೊರಳೊಳು ಪದಕ
ಸಟೆಯಲ್ಲ ಬ್ರಹ್ಮಾಂಢ ಹೃದಯದೊಳಿರುತಿರಲು
ಮಿಟಿ ಮಿಟಿ ನೋಡುವ ಈ ಮುದ್ದು ಕೃಷ್ಣ ॥ 1 ॥

ಮುಂಗುರುಳ ಮುಂಜೆಡೆ ಬಂಗಾರದರಳೆಲೆ
ರಂಗು ಮಾಣಿಕದ ಉಂಗುರವಿಟ್ಟು
ಪೊಂಗೆಜ್ಜೆ ಕಾಲಲಂದುಗೆ ಘಿಲ್ಲು ಘಿಲ್ಲೆನುತ
ಅಂಗಳದೊಳಗಾಡುತಿಹ ಮುದ್ದು ಕೃಷ್ಣ ॥ 2 ॥

ಹರಿವ ಹಾವನೆ ಕಂಡು ಹೆಡೆ ಹಿಡಿದು ಆಡುವ
ಕರುವಾಗಿ ಆಕಳ ಮೊಲೆಯುಣ್ಣುವ
ಅರಿಯದಾಟವ ಬಲ್ಲ ಅಂತರಂಗದ ಸ್ವಾಮಿ
ಧರೆಯೊಳಧಿಕನಾದ ಪುರಂದರ ವಿಠಲಯ್ಯ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಕುಲದಲ್ಲಿಯ ಗೋಪಿಕಾ ಸ್ತ್ರಿಯರು ಬಾಲಕೃಷ್ಣನನ್ನು ನೋಡಿ ಮುಗ್ಧರಾಗಿ ಯಶೋದೆಯ ಹತ್ತಿರ ಬಂದು ' ಇವನು ನಿನ್ನ ಮಗನೆ? ' ಎಂದು ಅಚ್ಚರಿಯಿಂದ ಕೇಳುತ್ತಲಿದ್ದಾರೆ.

**ಚೆನ್ನಾರ** = ಅತಿ ಸುಂದರ

**ಕೈಪ** = ಲಂಗೋಟಿ

**ಸಟೆ** = ಸುಳ್ಳು

**Classification:** Keerthane
**Ankita:** purandara vittala
**Location:** NA
**Category:** Krishna Leele,
**Sub-Category:** gopi, maga, Udupi, Krishna, benne, kannu, langoti, abharana, brahmanda, hrudaya, ungura, bangara, gejje, uraga, ADu, ATa, bhumi, govu,
**Pravachana:** NA
**Explanation:** NA